ಮೂಲ ದಾವಾ ನಂಃ 106/16 ಪಿ ಡಬ್ಲುಃ 1

ಸಾಕ್ಷಿಯನ್ನು ದಿನಾಂಕಃ 26-10-2021 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

ಪಾಟೀಸವಾಲುಃ ಶ್ರೀ ಎಂ ಎಲ್ ಎನ್ ವಕೀಲರಿಂದ

ನಮ್ಮ ಮನೆಯವರು ಪಡಸಾಲೆ ದಂಧೆ ಮಾಡುತ್ತಾರೆಂದರೆ ಸರಿ . ಆ ದಂಧೆಯಲ್ಲಿ ಹೆಣ್ಣುಮಕ್ಕಳು ಧರಿಸುವ ಆಭರಣ ವಸ್ತುಗಳು ಹಾಗೂ ಇತರೆ ಸೌಂದರ್ಯವರ್ಧಕ ವಸ್ತುಗಳನ್ನು ಮಾರಾಟ ಮಾಡಲಾಗುತ್ತದೆ ಎಂದರೆ ಇತ್ತೀಚೆಗೆ ಮಾರಾಟ ಮಾಡುತ್ತಿದ್ದಾರೆ ಎನ್ನುತ್ತಾರೆ . ನಮ್ಮ ಮನೆಯವರು ಕೋರ್ಟಿಗೆ ಬಂದು ಸಾಕ್ಷಿ ನುಡಿಯುವ ಸ್ಥಿತಿಯಲ್ಲಿದ್ದಾರೆ ಎಂದರೆ ಸರಿಯಲ್ಲ . ನಮ್ಮ ಮನೆಯವರಿಗೆ ಬುದ್ದಿಮಾಂದ್ಯತೆ ಇದೆ . ನಮ್ಮ ಮನೆಯವರಿಗೆ ಹುಟ್ಟಿನಿಂದಲೂ ಬುದ್ದಿಮಾಂದ್ಯತೆ ಇದೆ. ಆ ಬಗ್ಗೆ ವೈದ್ಯರಿಗೆ ತೋರಿಸಿಲ್ಲ. ಹುಟ್ಟಿನಿಂದಲೂ ಬುದ್ದಿಮಾಂದ್ಯತೆ ಹೊಂದಿದ್ದಾರೆಂಬ ಬಗ್ಗೆ ಸರ್ಟಿಫಿಕೇಟ್ ಪಡೆದಿಲ್ಲ . 1983 ರಲ್ಲಿ ನನ್ನ ಮತ್ತು ನಮ್ಮ ಯಜಮಾನರ ವಿವಾಹವಾಗಿದೆ. ನಮ್ಮ ಯಜಮಾನರು ದೈಹಿಕವಾಗಿ ಹಾಗೂ ಮಾನಸಿಕವಾಗಿ ಸರಿಯಿದ್ದಾರೆ, ಅವರು ಕೋರ್ಟಿಗೆ ಬಂದು ಸಾಕ್ಷಿ ನೀಡಿದರೆ ಸತ್ಯಹೊರಬರುತ್ತದೆ ಎಂದು ಅವರು ಬುದ್ದಿಮಾಂದ್ಯರಾಗಿದ್ದಾರೆಂದು ಹೇಳಿ ಅವರಿಂದ ನಾನು ಪವರ್ ಆಫ್ ಅಟಾರ್ನಿ ಪಡೆದಿದ್ದೇನೆ ಎಂದರೆ ಸರಿಯಲ್ಲ.

ದಾವಾ ಆಸ್ತಿಗಳು ಪಿತ್ರಾರ್ಜಿತವಾಗಿ ಬಂದಿವೆ ಎಂದು ತೋರಿಸಲು ಪಹಣಿ ಪತ್ರಿಕೆ ಮತ್ತು ತಹಶೀಲ್ದಾರ್ ರವರ ಆದೇಶದ ಹೊರತಾಗಿ ಬೇರೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ಉತ್ತರಿಸದೆ ಮೌನವಾಗಿರುತ್ತಾರೆ. 1 ನೇ ಪ್ರತಿವಾದಿ ಆಸ್ತಿಯಲ್ಲಿ ನಿಮಗೇನು ಕೊಡುವುದಿಲ್ಲ ಎಂದು ತಕರಾರು ಹಾಕಿದ್ದಾನೆ. ಕಡತೋಕಾ ಸರ್ವೆ ನಂ 30/5 ರಲ್ಲಿ ಪಿತ್ರಾರ್ಜಿತವಾಗಿ ಬಂದಂತಹ ಒಂದು ಮನೆ ಇದೆ ಎಂದರೆ ಸರಿ. ಆ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ಆ ಮನೆ ಕಿತ್ತು ಹಾಕಿದ್ದಾರೆ ಎನ್ನುತ್ತಾರೆ. ಆ ಮನೆಯನ್ನು ಕಿತ್ತು ಹಾಕಿದ್ದಾರೆಂದು ಇಂದು ನಾನು ಪ್ರಥಮ ಬಾರಿಗೆ ನ್ಯಾಯಾಲಯದಲ್ಲಿ ಹೇಳುತ್ತಿದ್ದೇನೆ ಎಂದರೆ ಸರಿ. ನಾಗೇಶ ಕುಪ್ಪಾ ಶೆಟ್ಟಿ ನಮ್ಮ ಮನೆಯವರ ಸಂಬಂಧಿ ಹಾಗೂ ಗಂಗಾಧರ ಕುಪ್ಪಾ ಶೆಟ್ಟಿ ನನ್ನ ಗಂಡನ ತಂದೆ. ಗಣಪತಿ ಪುಟ್ಟಾ ಶೆಟ್ಟಿ ನಮ್ಮ ಮಾವನ ಅಣ್ಣ . ಗಣಪತಿ ಪುಟ್ಟಾ ಶೆಟ್ಟಿ ರವರಿಗೆ ಎರಡು ಜನ ಸೊಸೆಯಂದಿರಿದ್ದಾರೆ. ನಾಗೇಶ ಕುಪ್ಪಾ ಶೆಟ್ಟಿ ರವರಿಗೆ ಯಾವುದೇ ವಾರಸಾದಾರರು ಇರುವುದಿಲ್ಲ , ವಾರಸಾದಾರರು ಇಲ್ಲ ಎಂದು ಅವರ ಹೆಸರನ್ನು ಕಡಿಮೆ ಮಾಡಲು ನಾವು ಯಾವುದೇ ಕ್ರಮ ಕೈಗೊಂಡಿಲ್ಲ . ನಾಗೇಶ ಮತ್ತು ಗಣಪತಿಗೆ ಮಕ್ಕಳು , ಮೊಮ್ಮಕ್ಕಳು ವಾರಸಾದರರು ಇದ್ದಾರೆ , ಆದರೆ ಅವರನ್ನು ನಾನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

ಗಂಗಾಧರ ಕುಪ್ಪಾ ಶೆಟ್ಟಿ ಮೊದಲು ಪಿತ್ರಾರ್ಜಿತ ಮನೆಯಲ್ಲಿ ವಾಸವಾಗಿದ್ದರು. ನಂತರ ಕೆಕ್ಕಾರ ಗ್ರಾಮದಲ್ಲಿ 1 ನೇ ಪ್ರತಿವಾದಿ ಮನೆಯಲ್ಲಿ ವಾಸವಾಗಿದ್ದಾರೆ. ಸುಮಾರು 20 ವರ್ಷಗಳಿಂದ 1 ನೇಪ್ರತಿವಾದಿ ಜೊತೆ ನನ್ನ ಮಾವ ಕೆಕ್ಕಾರ ಗ್ರಾಮದಲ್ಲಿ ವಾಸವಾಗಿದ್ದಾರೆ. . ಕೆಕ್ಕಾರ ಗ್ರಾಮದ ಸರ್ವೆ ನಂ 58/4 ರಲ್ಲಿ ಮನೆಕಟ್ಟಿ

ವಾಸವಾಗಿದ್ದಾನೆ. ಅದು ಆರ್ ಸಿ ಸಿ ಮನೆಯಾಗಿದೆ ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಹಣದಿಂದ ಆ ಆರ್ ಸಿ ಸಿ ಮನೆಕಟ್ಟಿದ್ದಾನೆ ಎನ್ನುವುದು ಸರಿಯಲ್ಲ . ಸಾಕ್ಷಿ ಮುಂದುವರೆದು ಸರ್ವೆ ನಂ 166/ಬೆಟ್ಟ23 ರಲ್ಲಿ ಕಲ್ಲಿನ ಕೋರೆ ಮಾಡಿ ಆ ಕಲ್ಲನ್ನು ಮಾರಾಟ ಮಾಡಿದ ಹಣದಿಂದ ಮತ್ತು ಸರ್ವೆ ನಂ 30/5 ರ ಬೆಳೆದ ಉತ್ಪನ್ನದ ಹಣದಿಂದ ಆ ಮನೆ ಕಟ್ಟಿದ್ದಾನೆ ಎನ್ನುತ್ತಾರೆ. ಸರ್ವೆ ನಂ 58/4 ನ್ನು 1 ನೇ ಪ್ರತಿವಾದಿ ಖರೀದಿಸಿದ್ದಾನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಆಸ್ತಿಯನ್ನು ನಮ್ಮ ಮಾವ ಖರೀದಿ ಮಾಡಿದ್ದಾರೆ ಎನ್ನುತ್ತಾರೆ . ನಮ್ಮ ಮಾವ ಖರೀದಿ ಮಾಡಿದ್ದಾನೆ ಎಂದು ತೋರಿಸಲು ಪಹಣಿ ಪತ್ರಿಕೆಗಳು ಮಾತ್ರ ಇರುತ್ತವೆ ಎನ್ನುತ್ತಾರೆ . ಆ ಸರ್ವೆ ನಂ ನ ಪಹಣಿ ಪತ್ರಿಕೆಯಲ್ಲಿ ನಮ್ಮ ಮಾವನ ಹೆಸರು ದಾಖಲಾಗಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ಉತ್ತರಿಸದೆ ಮೌನವಾಗಿರುತ್ತಾರೆ. ನಿಪಿ 3 ರಲ್ಲಿ ಕೂಡ 1 ನೇ ಪ್ರತಿವಾದಿ ಹೆಸರು ದಾಖಲಾಗಿರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಉತ್ತರಿಸದೆ ಮೌನವಾಗಿರುತ್ತಾರೆ. ನಾನಾಗಲಿ ಮತ್ತು ನನ್ನ ಗಂಡನಾಗಲಿ 1 ನೇ ಪ್ರತಿವಾದಿಗೆ ಮನೆಕಟ್ಟಲು ನಗದಾಗಿ ಹಣ ಕೊಟ್ಟಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿ ನಾವ್ಯಾಕೆ ಕೊಡಬೇಕು ಎನ್ನುತ್ತಾರೆ . ಮನೆ ಕಟ್ಟಿದಾಗಿನಿಂದಲೂ ಆ ಮನೆಯಲ್ಲಿ ಎಂದೂ ನಾವು ವಾಸವಾಗಿಲ್ಲ ಎಂದರೆ ಸರಿ . ಸಾಕ್ಷಿ ಮುಂದುವರೆದು ನಾವು ಆ ಮನೆಗೆ ಹೋಗಿ ಬಂದು ಮಾಡಿದ್ದೇವೆ ಎನ್ನುತ್ತಾರೆ. ನಮ್ಮ ಮಾವ ತೀರಿಕೊಂಡ ನಂತರ ಅವರ ಶವಸಂಸ್ಕಾರಕ್ಕೆ ಮತ್ತು ತಿಥಿ ಕಾರ್ಯಕ್ಕೆ ಹೋಗಿ ಬಂದು ಮಾಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿ ಅದಕ್ಕಿಂತ ಮೊದಲೂ ಹೋಗಿ ಬಂದು ಮಾಡಿದ್ದೇವೆ ಎನ್ನುತ್ತಾರೆ. ಆ ಮನೆ ತೆರಿಗೆ 1 ನೇ ಪ್ರತಿವಾದಿ ಕಟ್ಟುತ್ತಾ ಬಂದಿದ್ದಾನೆಂದರೆ ಸರಿ 1 ನೇ ಪ್ರತಿವಾದಿ ಉದ್ಯೋಗ ಪಡಸಾಲಿ ದಂಧೆ ಎಂದರೆ ಸರಿ . ಆ ಪಡಸಾಲಿ ದಂಧೆ 1 ನೇ ಪ್ರತಿವಾದಿ ನಮ್ಮ ಮದುವೆಗಿಂತ ಮೊದಲೇ ಮಾಡುತ್ತಾ ಬಂದಿರುತ್ತಾನೆ ಎನ್ನುವ ಪ್ರಶ್ನೆಗೆ ಸಾಕ್ಷಿ ಆ ಕಾಲಕ್ಕೆ ಆತ ಚಿಕ್ಕವನಿದ್ದ , ನಮ್ಮ ಮಾವ ಮತ್ತು ನಮ್ಮ ಮನೆಯವರು ಮಾಡುತ್ತಾ ಬಂದಿದ್ದರು ಎನ್ನುತ್ತಾರೆ . ನಮ್ಮ ಮನೆಯವರು ಪಡಸಾಲಿ ದಂಧೆ ಮಾಡುವುದನ್ನು ಬಿಟ್ಟು ಎಷ್ಟು ವರ್ಷಗಳಾಗಿವೆ ಎನ್ನುವ ಪ್ರಶ್ನೆಗೆ ಸಾಕ್ಷಿ ಮೊದಲು ಆ ದಂಧೆ ಮಾಡುತ್ತಿರಲಿಲ್ಲ ಮನೆಯಲ್ಲಿರುತ್ತಿದ್ದರು ಎನ್ನುತ್ತಾರೆ ಮುಂದುವರೆದು 15 ವರ್ಷಗಳಿಂದ ಮಾಡುತ್ತಿಲ್ಲ ಎಂದು ಪುನಃ ಹೇಳುತ್ತಾರೆ. ಪಡಸಾಲಿ ದಂಧೆ ಯನ್ನು ಮಾಡುವುದನ್ನು ನಮ್ಮ ಮಾವನವರು ಸಾಯುವುದಕ್ಕಿಂತ 2 ವರ್ಷ ಮೊದಲೇ ಬಿಟ್ಟಿದ್ದರು . ನಮ್ಮ ಮಾವನವರು ಸಾಯುವವರೆಗೂ ದೈಹಿಕ ಮತ್ತು ಮಾನಸಿಕವಾಗಿ ಸುಸ್ಥಿತಿಯಲ್ಲಿದ್ದರು ಎಂದರೆ ಸರಿ . ಪಡಸಾಲಿ ದಂಧೆ ಎಂದರೆ ಎಲ್ಲೆಲ್ಲಿ ಜಾತ್ರೆ ಇರುತ್ತವೆ , ಅಲ್ಲಿಗೆ ಹೋಗಿ ವಸ್ತುಗಳನ್ನು ಮಾರಾಟ ಮಾಡುವುದಾಗಿರುತ್ತದೆ ಎಂದರೆ ಸರಿ. ಪಡಸಾಲಿ ದಂಧೆ ಯಿಂದ 1 ವರ್ಷಕ್ಕೆ ಖರ್ಚು ವೆಚ್ಚ ಕಳೆದು 1,00,000/- ರೂ ಲಾಭವಾಗುತ್ತದೆ ಎಂದರೆ ಸರಿ . ಸರ್ವೆ ನಂ 58/4 ನ್ನು 1 ನೇ ಪ್ರತಿವಾದಿ ಸ್ವಂತ ಹಣದಿಂದ ಕ್ರಯಕ್ಕೆ ಪಡೆದ ಆಸ್ತಿಯಾಗಿರುತ್ತದೆ ಮತ್ತು ಆ ಆಸ್ತಿಯಲ್ಲಿ ಆತ ಸ್ವಂತ ಹಣದಿಂದ ಒಂದು ಮನೆ ಕಟ್ಟಿದ್ದಾನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಸ್ವಯಾರ್ಜಿತ ಆಸ್ತಿ ಕಸಿದುಕೊಳ್ಳಬೇಕೆಂಬ ಉದ್ದೇಶದಿಂದ ಈ ದಾವೆಯಲ್ಲಿ ಆ ಆಸ್ತಿ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಸರ್ವೆ ನಂ 30/5 ರಲ್ಲಿ ಈಗ 15-16 ತೆಂಗಿನ ಮರಗಳು ಇವೆ. ಅವುಗಳಲ್ಲಿ 10 ಮರಗಳು ಫಲ ನೀಡುತ್ತವೆ. ಆ ಮರಗಳನ್ನು ನಾವೇ ನೆಟ್ಟು ಬೆಳೆಸಿರುವುದು . ಆ ಮೊದಲು ಅಲ್ಲಿ ಮರಗಳು ಇದ್ದವು ಅವು ಸತ್ತು ಹೋಗಿವೆ . ಮೊದಲಿನ ಅಡಿಕೆ ಮರಗಳು ಸತ್ತು ಹೋಗಿದ್ದರಿಂದ ನಾವೇ ಈಗ ನೆಟ್ಟು ಬೆಳೆಸಿದ್ದೇವೆ . ನಾವು ಬೆಳೆಸಿದ ತೆಂಗಿನ ಮತ್ತು ಅಡಿಕೆ ಮರಗಳ ಉತ್ಪನ್ನವನ್ನು ನಾವೇ ಉಪಯೋಗಿಸುತ್ತಾ ಬಂದಿದ್ದೇವೆ. 20 ವರ್ಷಗಳಿಂದ ಆ ಮರಗಳ ಉತ್ಪನ್ನವನ್ನು ನಾವೇ

ಬಳಸುತ್ತಾ ಬಂದಿದ್ದೇವೆ. ಸರ್ವೆ ನಂ 30/5 ರ ಉತ್ಪನ್ನದ ಹಣದಿಂದ 1 ನೇ ಪ್ರತಿವಾದಿ ಮನೆ ಕಟ್ಟಿಸಿದ್ದಾನೆಂದು ಸುಳ್ಳು ಹೇಳುತ್ತಿದ್ದಾನೆಂದರೆ ಸರಿಯಲ್ಲ.

ಸರ್ವೆ ನಂ 57 ನ್ನು ನಮ್ಮ ಮಾವ ಖರೀದಿಸಿದ್ದಾನೆ ಎಂದರೆ ಸರಿ. ಅವರು ಸ್ವಂತ ಹಣದಿಂದ ಈಸರ್ವೆ ನಂ ಆಸ್ತಿ ಕ್ರಯಕ್ಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡನೂ ಸಹ ದುಡಿದು ಖರೀದಿಸಿದ್ದಾರೆ ಎನ್ನುತ್ತಾರೆ. ದಿಃ 07.11.2012 ರಂದು ನಮ್ಮ ಮಾವ 1 ನೇ ಪ್ರತಿವಾದಿಗೆ ಸರ್ವೆ ನಂ 57 ರ ಪೈಕಿ 19 ಗುಂಟೆ 12 ಆಣೆ ಆಸ್ತಿಯನ್ನು ವಿಲ್ ಮುಖಾಂತರ ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅ ಪಟ್ಟಿಯ ಅನುಕ್ರಮ ನಂ 1 ರ ಆಸ್ತಿಯು ಮರಣ ಶಾಸನದ ಪ್ರಕಾರ 1 ನೇ ಪ್ರತಿವಾದಿಗೆ ಸೇರಿದ್ದಾಗಿರುತ್ತದೆ ಮತ್ತು ಆ ಆಸ್ತಿಯಲ್ಲಿ ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ . ಪ್ರತಿವಾದಿ ಆಸ್ತಿಯಲ್ಲಿ ಹಕ್ಕನ್ನು ಪಡೆಯುವ ಉದ್ದೇಶದಿಂದ ನಾವು ಈ ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಅ ಪಟ್ಟಿಯಲ್ಲಿರುವ ಆಸ್ತಿಯಲ್ಲಿ ನಮಗಾಗಲಿ ಉಳಿದ ಪ್ರತಿವಾದಿಗಾಗಲಿ ಹಕ್ಕು ಇರುವುದಿಲ್ಲ , ಅದು 1 ನೇ ಪ್ರತಿವಾದಿಗೆ ಸೇರಿದ ಆಸ್ತಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂ 57 ಮತ್ತು 58/4 ರಲ್ಲಿ ನಮಗೆ ಹಕ್ಕು ಇದೆ ಎಂದು ತೋರಿಸಲು ನಾವು ಹಾಜರುಪಡಿಸಿದ ದಾಖಲಾತಿಗಳನ್ನು ಬಿಟ್ಟು ಬೇರೆ ದಾಖಲೆಗಳು ಇರುವುದಿಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಹೆಚ್ಚುವರಿ ಸಿವಿಲ್ ಜಡ್ಜ, ಹೊನ್ನಾವರ.